# ಕಾಯುವ ಕಂಗಳು

ಎತ್ತ ಹೋದರೋ ಎಲ್ಲ
ಯಾರ ಸುಳಿವೂ ಇಲ್ಲ
ಹೋಗಿ ನೋಡುವೆನೆಂದರೆ
ತಮ್ಮನಿರುವನಲ್ಲ!
ಹಾಸಲುಂಟು ಹೊದೆಯಲುಂಟು
ಯಾರೋ ಕೊಟ್ಟದ್ದು ಇದೆಲ್ಲ
ಮತ್ತೆ ಮತ್ತೆ ಕಾದು ನಿಂತು
ಪಡೆದು ತಂದರಲ್ಲ!
ಊಟವಂತೆ ತಿಂಡಿಯಂತೆ
ಎಲ್ಲೋ ಕೊಡುವರಂತೆ
ಕಿಟ್ ಅಂತೆ, ಚೀಲವಂತೆ
ಎಲ್ಲಾ ಇರುವುದಂತೆ!
ಅಡಿಗೆ ಮಾಡೋ ಕೆಲಸವಿಲ್ಲ
ಸ್ಟೌಗೂ ರೆಸ್ಟ್ ಇರಲಿ
ಏನಿದೆಯೊ ಏನಿಲ್ಲವೊ
ಬೆಚ್ಚಗೆ ಸೂರೊಂದಿರಲಿ
ಎಲ್ಲಾ ಸರಿ, ಒಂದೇ ಚಿಂತೆ
ನನ್ನ ಶಾಲೆಯೆಲ್ಲಿ?
ತೆರೆದೀತೆ? ಕರೆದೀತೆ?
ಕಲಿಸೀತೆ ಬದುಕ ಮತ್ತೆ?
ನಾ ಓದಬೇಕು, ದುಡಿಯಲೂ ಬೇಕು
ಎಲ್ಲರನು ಸಲಹಬೇಕು
ಬೇನೆ ದೂರಾಗಿ ಬವಣೆ ಮರೆಯಾಗಿ
ಬದುಕು ಚಿಗುರಬೇಕು
ಏನು ತರುವರೊ ಅಥವಾ ತಾರರೊ
ಅರಳಿ ಕಾದಿರುವ ಕಂಗಳು
ಕನಸ ಕಾಣುತಿಹ, ಎಚ್ಚರಾಗುತಿಹ
ಬಿಚ್ಚು ಮನಸಿನ ಮೊಗಗಳು...

● ಸುಬ್ಬಲಕ್ಷ್ಮಿ ಎಚ್.ಕೆ.



# ಕೊನರೀತೇ ಮತ್ತೆ?

ಬದುಕೆಂಬುದು ಬೀದಿಗೆ ಬಿತ್ತು
ಕಾಗೆ ಕಚ್ಚಿಕೊಂಡು ಹೋದಂತೆ
ಕೊಚ್ಚಿ ಹೋಯಿತು ಬೆಚ್ಚನೆಯ ಗೂಡು
ಕರುಣೆ ಇಲ್ಲದ ಗಂಗವ್ವನ ಮಡಿಲಿಗೆ

ಉಳಿದದ್ದು ಮೋಟು ಗೋಡೆ
ಹಾಸಲೊಂದು ಹೊದೆಯಲೊಂದು
ಹಸಿದು ಕಂಗಾಲಾಗಿ ಕುಳಿತಿವೆ
ಗುಬ್ಬಚ್ಚಿಯಂತಹ ಜೀವಗಳೆರಡು

ಕೂಳು ಕುದಿಸುವ ಒಲೆ
ಆರಿ ಅಟ್ಟ ಸೇರಿದೆ
ಬಟ್ಟ ಬಯಲಿಗೆ ಬಿದ್ದಿದೆ
ಬಂಗಾರದಂತಹ ಬದುಕು

ಸುತ್ತಲೆಲ್ಲ ಹಸಿರಿದ್ದರೇನು?
ಹೊಟ್ಟೆಯ ದೊಂಬರಾಟ ನಿಂತೀತೆ?
ಬೆಂಗಾಡಾದ ಬದುಕ ಕೊರಡು
ಕೊನರೀತೆ ಮತ್ತೆ?

● ಗೌರಿ ಚಂದ್ರಕೇಸರಿ